ದಮಯಂತಿ ಹೇಳಿದಳು. ಆಗ ಅವರು ಬಾಹುಕನು ಹೇಳಿದ ಮಾತನ್ನು ಹೀಗೆ ಪುನರುಚ್ಚರಿಸಿದರು:

'ಬ್ರಾಹ್ಮಣೋತ್ತಮನೇ ಕೇಳು. ಸತಿಗೆ ವಂಚನೆ ಮಾಡಿದ ಮಾಡಿದ ಪತಿ ಮತಿಗೆಟ್ಟವನು ಸರಿ. ಅದರಿಂದ ಆ ಸತಿಗೆ ಏನೂ ತೊಂದರೆಯಿಲ್ಲ. ಪತಿಯಾದವನಿಗೇ ತೊಂದರೆ. ಪತಿವ್ರತ ಧರ್ಮಾಚರಣೆಯವಳು ಪತಿಯ ಗುಣದೋಷಗಳನ್ನು ಎಣಿಕೆಗೆ ತೆಗೆದುಕೊಳ್ಳುವಳೇ? ಸತ್ಯವೇ ಮೋಕ್ಷ ಕಾರಣ.

'ಪತಿಯ ತಪ್ಪೆಣಿಸುವ ಸತಿ ಪತಿವ್ರತೆಯೇ? ಧರಣಿಯನ್ನು ಪಾಲಿಸುವ ರಾಜನನ್ನು ನಿಂದಿಸುವವನು ಸೇವಕನೇ ತಂದೆಯ ಮಾತನ್ನು ಕಡೆಗಣಿಸುವವನು ಮಗನೇ? ಗುರುವಿನ ಮಾತನ್ನು ಕೇಳದ ಪತಿತ ಪಾತಕಿ ಶಿಷ್ಯನೇ?'

ಬಾಹುಕನು ವಿಪ್ರರಿಗೆ ಹೇಳಿದ ನುಡಿ ಕೇಳಿ ತಲೆದೂಗಿದ ದಮಯಂತಿ ಮನಸ್ಸಿನಲ್ಲಿ ಆತನೇ ತನ್ನ ಪತಿ ಎಂದುಕೊಂಡಳು. ವಿಪ್ರರ ವರದಿಯ ಮಾತಿನಲ್ಲಿ ಸಂಶಯಕ್ಕೆ ಎಡೆಯಿಲ್ಲವೆಂದುಕೊಂಡು ಕಣ್ಣೀರು ಮಿಡಿದಳು.

ಬಾಹುಕನನ್ನು ಪರೀಕ್ಷಿಸುವ ಉಪಾಯವನ್ನು ಆಲೋಚಿಸಿದಳು. ತಂದೆಗೆ ವಿಷಯ ತಿಳಿಸಿ ಒಪ್ಪಿಗೆ ಪಡೆದು ಸುದೇವನನ್ನು ಕರೆಸಿದಳು. ಆ ದೂರ ವಿಪ್ರೋತ್ತಮನಿಗೆ ಎಲ್ಲ ವಿಚಾರವನ್ನು ತಿಳಿಸಿದಳು. ಪ್ರಯಾಣದ ವ್ಯವಸ್ಥೆಯನ್ನು ಮಾಡಿ ಅಯೋಧ್ಯೆಗೆ ಕಳುಹಿಸಿದಳು.

ಸುದೇವನು ಹಣೆಯಲ್ಲಿ ಪ್ರಕಾಶಿಸುವ ಗೋಪೀಚಂದನವನ್ನು ಧರಿಸಿ, ಹೊಸ ಯಜ್ಞೋಪವೀತವನ್ನು ತೊಟ್ಟು, ಕಂಕುಳಲ್ಲಿ ಚೀಲವನ್ನು ಇರುಕಿಕೊಂಡನು. ಬೆರಳಿನಲ್ಲಿ ಜಪಮಾಲೆ ಹಿಡಿದು, ಭುಜದ ಮೇಲೆ ಉತ್ತರೀಯ ಹೊದ್ದು, ಸಡಿಲ ಕಚ್ಚೆಯುಟ್ಟನು. ಇಡೀ ಲೋಕವೇ ಆಶ್ಚರ್ಯಪಡುವ ರೂಪಿನಲ್ಲಿ ಬ್ರಹ್ಮನಂತೆ ಕಾಣುತ್ತ ಋತುಪರ್ಣನ ಓಲಗಕ್ಕೆ ಬಂದನು.

ಅವನನ್ನು ನೋಡಿದ ರಾಜ ಋತುಪರ್ಣನು ಕುತೂಹಲಗೊಂಡು ಕೇಳಿದನು,

'ತಾವು ಯಾರು? ಎಲ್ಲಿಂದ ಬಂದಿರಿ? ತಾವು ದೂರ ದೇಶದ ಹಿರಿಯರು. ಅಲ್ಲಿಯ ವಿಶೇಷವೇನು?'

'ಭೂರಮಣ ಕೇಳು. ಈ ಭೂಮಿಯಲ್ಲಿ ಸಂಚರಿಸುತ್ತ ಇಲ್ಲಿಗೆ ಬಂದೆವು. ವಿಶೇಷವೆಂದರೆ ವಿದರ್ಭಕ್ಕೆ ರಾಜ ಮಾಹಾರಾಜರು ತಮ್ಮ ಚತುರಂಗ ಸೇನೆಯೊಂದಿಗೆ ಆಗಮಿಸುತ್ತಿದ್ದಾರೆ! ಅನೇಕ ದೇಶದ ಭಿಕ್ಷುಕರು, ಬ್ರಾಹ್ಮಣೋತ್ತಮರು, ಮಂತ್ರಿಗಳು, ಜೋಯಿಸರು, ಹಾಡುಗಾರರು ಎಲ್ಲರೂ ಪ್ರಕಾಶಿಸುವ ತೇಜಸ್ಸಿನಲ್ಲಿ ಸಂತೋಷದಿಂದ ಬರುತ್ತಿದ್ದಾರೆ. ಅಲ್ಲಿ ದಮಯಂತಿಯ ಸ್ವಯಂವರ ಸಡಗರದಿಂದ ನೆರವೇರಲಿದೆಯಂತೆ. ಆ ವೈಭವವನ್ನು ವಾಸುದೇವನೇ ಬಲ್ಲ.'

'ವಿಪ್ರೋತ್ತಮನೇ, ದಮಯಂತಿಯ ಸ್ವಯಂವರವೇ?'

'ಹೌದು ಮಹಾರಾಜ. ರಾತ್ರಿ ಮಲಗಿದ್ದ ದಮಯಂತಿಯನ್ನು ನಳನೃಪ ಬಿಟ್ಟುಹೋದನು. ನೀತಿಗೆಟ್ಟ ಅವಳಿಗೆ ತಂದೆ ಸ್ವಯಂವರ ಏರ್ಪಡಿಸಿದ್ದಾನೆ. ನೀವು ಈಗಲೇ ಪ್ರಯಾಣ ಮಾಡಬಹುದು' ಎಂದು ವರ್ಣಿಸಿ ಹೇಳಲು ಋತುಪರ್ಣನು ಹೆಣ್ಣಿನ ಮೋಹದಲ್ಲಿ ಬಾಹುಕನನ್ನು ಕರೆಸಿದನು. ರಥಕ್ಕೆ ಕುದುರೆಗಳನ್ನು ಹೂಡಿ ಸಿದ್ಧನಾಗಲು ಆಜ್ಞೆ ಮಾಡಿದನು. ಬಾಹುಕನು 'ಹಸಾದ' ಎಂದು ಹೇಳಿ ರಾಜನಿಗೆ ವಂದಿಸಿ ತನ್ನ ಮನೆಗೆ ಬಂದನು. ನಳನು ಹೊರಡಲು ತಯಾರಾಗಿ– ಜಗನ್ನಾಥ! ದಮಯಂತಿ ಮರಳಿ ವಿವಾಹವಾಗುತ್ತಿದ್ದಾಳೆಯೇ? ಈ ಸಂಗತಿ ಯಾರಿಂದ ಹೊಮ್ಮಿದೆಯೋ? ದಮಯಂತಿ ದ್ರೋಹಿಯಾದಳೇ? ಇದರಲ್ಲಿ ಏನೋ ಸಂಶಯ ಹೊಗೆಯಾಡುತ್ತಿದೆ– ಎಂದು ಹಲವು ಬಗೆಯಲ್ಲಿ ತನ್ನ ಸತಿಯ ಮರು ಸ್ವಯಂವರ ಕುರಿತು ಚಿಂತಿಸುತ್ತ ಅರಮನೆಗೆ ಬಂದನು.

ಲಾಯದಲ್ಲಿಯ ಉತ್ತಮವಾದ ಕುದುರೆಯನ್ನು ಆಯ್ದು ರಥಕ್ಕೆ ಹೂಡಿದನು. ವಾಯುವೇಗದಲ್ಲಿ ಸಾಗಬಲ್ಲ ಆ ತೇರನ್ನು ತಂದು ರಾಜ ಋತುಪರ್ಣನ ಬಳಿ ನಿಲ್ಲಿಸಿದನು. ರಾಜ ರಥ ಏರಿದನು. ಅವನ ಜೊತೆ ಆನೆ, ಕುದುರೆ, ರಥ, ಕಾಲಾಳುಗಳು ಬಂದು ನೆರದವು. ಮಂಗಲ ವಾದ್ಯಗಳು ರಭಸದಲ್ಲಿ ಮೊಳಗಲು ರಾಜನು ವಿದರ್ಭಕ್ಕೆ ನಡೆದನು. ಹೊರಡುವಾಗ ರಾಜನು ಬಾಹುಕನಿಗೆ,

**ತನ್ನಿನಿಯಳಿಗೆ ವಿಧಿ ಬರೆದನೇ ಶಾಸನವ ಮೀರುವರಾರೆನುತ ಮರುಗಿದನು ನಳನೃಪತಿ**

'ಎಲ್ಲೆ ಬಾಹುಕನೇ, ನನ್ನ ಮನಸ್ಸು ಮಾನಿನಿ ದಮಯಂತಿಯನ್ನು ನೋಡಲು ಕಾತುರಗೊಂಡಿದೆ. ಇದೇ ದಿನ ವಿದರ್ಭನಗರವನ್ನು ಸೇರುವಂತೆ ರಥವನ್ನು ನಡೆಸು' ಎಂದು ಹೇಳಿದನು. ಅದನ್ನು ಕೇಳಿ ದುಗುಡ ತುಂಬಿದ ಮನದ ತೇರಲ್ಲಿ ಓಲಾಡುತ್ತ ನಳನು ತನ್ನೊಳಗೆ ತಾನೇ ನಕ್ಕನು.

ತನ್ನ ಪ್ರಿಯ ಪತ್ನಿಗೆ ಈ ರೀತಿ ವಿಧಿ ಶಾಸನ ಬರೆದನೇ? ಇದನ್ನು ಮೀರುವವರಾರು ಎನ್ನುತ್ತ ತಳಮಳಗೊಂಡನು.

ಅವನು ತಾನು ಕೈಯಲ್ಲಿ ಹಿಡಿದ ಕಡಿವಾಣವನ್ನು ಸಡಿಲ ಬಿಡಲು ರಥದ ಕುದುರೆಗಳು ಅಡಿಗಡಿಗೆ ಚಿಮ್ಮುತ್ತ ನೆಗೆದುವು. ರಥವು ವಾಯುವೇಗದಲ್ಲಿ ಸಾಗಿತು. ಹೀಗೆ ರಭಸದಲ್ಲಿ ಹೋಗುವಾಗ ರಾಜನು ಹೊದೆದ ಹಚ್ಚಡವು ಹಾರಿ ನೆಲಕ್ಕೆ ಬಿದ್ದಿತು. ತಕ್ಷಣ ರಾಜನು ಸಾರಥಿಯನ್ನುದ್ದೇಶಿಸಿ ನುಡಿದನು.

'ವಸ್ತ್ರ ಬಿದ್ದುಹೋಯಿತು. ಏನು ಮಾಡುವುದು?'

'ಪ್ರಭುವೇ, ಸಂಭ್ರಮದ ಈ ಓಟದಲ್ಲಿ ನಿಮ್ಮ ವಸ್ತ್ರ ತುಂಬ ಹಿಂದುಳಿದಿದೆ. ನಮ್ಮ ವಾಯುಗತಿಯಲ್ಲಿ ಹಲವು ಯೋಜನ ದೂರ ಬಂದಿದ್ದೇವೆ. ಹಚ್ಚಡದ ಮಾತೇಕೆ?' ಎಂದು ಬಾಹುಕ ಹೇಳಲು, ಅವನ ಸಾರಥ್ಯವನ್ನು ಮೆಚ್ಚಿ ರಾಜನು,

'ಸಾರಥಿ ಎಂದು ಪ್ರಖ್ಯಾತನಾದವನು ನೀನು' ಎಂದು ಹೇಳಿ ಅವನನ್ನು ಕೊಂಡಾಡಿದನು. ಹಾಗೆ ಸಾಗಿ ಬರುತ್ತಿರಲು ಕಾಡಿನಲ್ಲಿ ಒಂದು ತಾರೆಯ ಮರವನ್ನು ನೋಡುತ್ತ ಬಾಹುಕನಿಗೆ ಪ್ರಶ್ನೆ ಹಾಕಿದನು.

**ತಾರೆಯ ಮರನನದರೊಳು ಸಂದ ಫಲಪರ್ಣಂಗಳೆಣಿಸದೆ ಸೂತ ಪೇಳು**

'ಎಲೆ ಸಾರಥಿಯೇ, ಆ ಮರದಲ್ಲಿ ಹಣ್ಣು ಮತ್ತು ಎಲೆಗಳನ್ನು ಎಷ್ಟಿವೆಯೆಂದು ಎಣಿಸದೆ ಹೇಳು ನೋಡೋಣ.'

'ಮಹಾ ಪ್ರಭುವೇ, ನನಗೆ ಇಂದು ಬುದ್ಧಿ ಮಂಕಾದಂತಿದೆ. ತಪ್ಪಾಗಿ ಭಾವಿಸದೆ ನೀವೇ ಅದನ್ನು ತಿಳಿಸಿ' ಎಂದು ನಳನು ಖಿನ್ನವಿಸಿದನು. ರಾಜನು ಅವನಿಗೆ ಸರಿಯಾದ ಲೆಕ್ಕವನ್ನು ಹೇಳಿದನು.

ಅದನ್ನು ಪರೀಕ್ಷಿಸಲು ಬಾಹುಕನು ರಥದಿಂದ ಇಳಿದು ಬಂದನು. ಮರದ ಬಳಿ ನಿಂತು ಎಲ್ಲ ಕೊಂಬೆಗಳಲ್ಲಿರುವ ಫಲ ಮತ್ತು ಎಲೆಗಳನ್ನು ಪದ್ಮ ಸಂಖ್ಯೆಯಲ್ಲಿ ಎಣಿಸಿದನು. ಹೀಗೆ ಒಲಿದ ಲೆಕ್ಕವನ್ನು ಕಂಡು ನಳನೃಪನು ಮನಸ್ಸಿನಲ್ಲಿ ಪುಷ್ಕರನನ್ನು ತಾನು ಗೆಲ್ಲುವ ಸೂಕ್ತ ಕಾಲ ಒದಗಿ ಬಂತು ಎಂದುಕೊಂಡು ಹಿಂತಿರುಗಿದನು. ಆಗ ಕಾಲ ಪುರುಷನು ಎದುರಾಗಿ,

**ತೊಲಗಿದೆನು ಇಂದಿನಲಿ ಶುಭಮಂಗಳಕರವು ನಿನಗಪ್ಪುದು**

'ಎಲೆ ನೃಪಾಲಕ, ನಿನ್ನ ಸತ್ಯವನ್ನು ಪರೀಕ್ಷಿಸಬೇಕೆಂದು ಅತಿಯಾಗಿ ಕಾಡಿದೆ. ದುಃಖಕ್ಕೆ ದೂಡಿದೆ. ಇನ್ನು ನಿನ್ನ ಮನದ ನೋವನ್ನು ಬಿಡು. ಇಂದು ನಿನ್ನನ್ನು ಬಿಟ್ಟು ತೊಲಗಿ ಹೋಗುತ್ತೇನೆ. ನಿನಗೆ ಶುಭಮಂಗಳವಾಗಲಿ' ಎಂದು ಹೇಳಿದನು. ಆಗ ನಳನೃಪತಿಯು ಕೋಪಗೊಂಡರೂ ಅವನಿಗೆ ಶಾಪಕೊಡದೆ, ಕ್ಷಮಿಸಿದನು.

ಧರ್ಮರಾಜನೇ ಕೇಳು. ಲೋಕಕ್ಕೆ ದೀನ ಜನ ಬಾಂಧವನಾದ ನಳನೃಪನು ಕಲಿಪುರುಷನನ್ನು ಅತ್ತ ಕಳುಹಿಸಿ ಬಂದು ರಥವೇರಿದನು. ಋತುಪರ್ಣರಾಜನಿಗೆ ತನ್ನ ಅಶ್ವ ವಿದ್ಯೆಯನ್ನು ಕಲಿಸಿ, ಅವನಿಂದ ವೃಕ್ಷ ವಿದ್ಯೆಯನ್ನು ಕೆಲವೇ ನಿಮಿಷದಲ್ಲಿ ತಿಳಿದುಕೊಂಡನು.

(ಸಶೇಷ)

**ವಾಸ್ತವ**

ಜಗತ್ತಿನ
ಕೆಲ ಕಾಯಿಲೆಗಳು
ವಾಸಿಯಾಗುವುದೇ
ಇಲ್ಲ
ಉದಾಹರಣೆಗೆ
ಪ್ರೇಮ!

★ **ಹೊಸಕೊಪ್ಪ ಶ್ರೀಧರ**

